


# ಪ್ರಾಮಾಣಿಕತೆಯ ರಹಸ್ಯ

ಹಿಂದೆ ಪರ್ಷಿಯಾ ದೇಶದಲ್ಲಿ 'ದಾರಾ' ಎಂಬ ಕುರಿಗಾಹಿ ಯುವಕನಿದ್ದನು. ಅವನು ಕಡು ಬಡವನಾಗಿದ್ದರೂ, ಜ್ಞಾನಿಯೂ, ಬುದ್ಧಿವಂತನೂ ಆಗಿದ್ದನು. ಅವನ ಜಾಣ್ಮೆಯ ಬಗ್ಗೆ ಅರಿತ, ಆ ದೇಶದ ದೊರೆಯಾದ 'ಷಾ'ನು, ಅವನನ್ನು ತನ್ನ ಅರಮನೆಗೆ ಕರೆಸಿ ತನ್ನ ಸೇವೆಗೆ ನೇಮಿಸಿಕೊಂಡನು. ಕ್ರಮೇಣ ದಾರಾನು ತನ್ನ ಬುದ್ಧಿವಂತಿಕೆ ಹಾಗೂ ಪ್ರಾಮಾಣಿಕ ನಡವಳಿಕೆಯಿಂದಾಗಿ, ಆಸ್ಥಾನದ ಪ್ರಧಾನ ಪದವಿಗೇರಿದನು. ಅವನ ಉನ್ನತಿಯನ್ನು ಸಹಿಸದ, ಆಸ್ಥಾನದ ಇತರ ಮಂತ್ರಿಗಳು ಅಸೂಯೆಯಿಂದ ಕುದಿಯತೊಡಗಿದರು. ಅವನನ್ನು ಅಧಿಕಾರದಿಂದ ಕೆಳಗಿಳಿಸುವ ಒಂದು ಸಂದರ್ಭಕ್ಕಾಗಿ ಕಾಯತೊಡಗಿದರು.

ಒಮ್ಮೆ ಷಾ ತನ್ನ ರಾಜ್ಯದ ಒಂದು ಪ್ರಾಂತ್ಯಕ್ಕೆ ಆಪ್ತವಾದ ದಾರಾನನ್ನು ತಾತ್ಕಾಲಿಕ ಸಾಮಂತನನ್ನಾಗಿ ನೇಯಮಿಸಿ ಕಳುಹಿಸಿದನು. 'ದಾರಾ'ನು ರಾಜ್ಯದಲ್ಲಿಲ್ಲದ ಈ ಸಮಯದಲ್ಲಿ, ಅವನ ವಿರೋಧಿಗಳು ದೊರೆಯ ಬಳಿ ಅವನ ಮೇಲೆ ಇಲ್ಲಸಲ್ಲದ ದೂರುಗಳನ್ನು ಹೇಳಿದರು. ಅವನು ಮಹಾ ಲಂಚಕೋರನೆಂದೂ, ಬೊಕ್ಕಸಕ್ಕೆ ಸೇರಬೇಕಾದ ಹಣ ಹಾಗೂ ಅಮೂಲ್ಯ ವಸ್ತುಗಳನ್ನು ಲಪಟಾಯಿಸಿ, ದೊಡ್ಡದೊಂದು ಪೆಟ್ಟಿಗೆಯೊಳಗೆ ಅಡಗಿಸಿಟ್ಟು, ತಾನೆಲ್ಲಿ ಹೋದರೂ ಪೆಟ್ಟಿಗೆಯನ್ನು ತನ್ನೊಂದಿಗೆ ಒಯ್ಯುವನೆಂದೂ ಪರಿಪರಿಯಾಗಿ ಬಣ್ಣಿಸಿ ಹೇಳಿದರು. ದೊರೆಗೆ ಈ ಮಾತುಗಳ ಮೇಲೆ ಪೂರ್ಣವಾಗಿ ನಂಬಿಕೆಯುಂಟಾಗದಿದ್ದರೂ ಆ 'ಪೆಟ್ಟಿಗೆ'ಯ ಬಗ್ಗೆ ಕೌತುಕ ಹೆಚ್ಚಿ, ಅದರ ರಹಸ್ಯವನ್ನು ತಿಳಿಯಬೇಕೆಂದು ನಿರ್ಧರಿಸಿದನು.

ಷಾನು ಅದೇ ದಿನ ರಾತ್ರಿ ಯಾವ ಬಗೆಯ ಪೂರ್ವ ಸೂಚನೆಯನ್ನು ಕೊಡದೆ ದಾರಾನ ಬಿಡಾರಕ್ಕೆ ಬಂದಿಳಿದನು. ಸ್ವಾಗತ ಸತ್ಕಾರಗಳೆಲ್ಲ ಮುಗಿದ ನಂತರ ದೊರೆಯು ಮೂಲೆಯಲ್ಲಿದ್ದ ಭಾರೀ ಗಾತ್ರದ ಒಂದು ಪೆಟ್ಟಿಗೆಯನ್ನು ಕಂಡನು! ಇನ್ನವನಿಗೆ ತಡೆಯದಾಯಿತು. 'ಗೆಳೆಯಾ ಆ ಪೆಟ್ಟಿಗೆಯಲ್ಲಿ ಏನಿದೆ? ತೋರಿಸುವೆಯಾ?' ಎಂದು ಕೇಳಿದನು. ದಾರಾನಾ ಮುಖದಲ್ಲಿ ಮಂದಹಾಸ ಮಿನುಗಿತು. ಮರು ಮಾತಾಡದೆ ಎದ್ದು ಹೋಗಿ ಪೆಟ್ಟಿಗೆಯ ಬೀಗ ತೆಗೆದು ಸರಿದು ನಿಂತನು. ದೊರೆ ತಾನೇ ಪೆಟ್ಟಿಗೆಯ ಮುಚ್ಚಳ ತೆರೆದು ಕುತೂಹಲದಿಂದ ಇಣುಕಿದನು! ಅಲ್ಲಿ ಕಂಡದ್ದೇನು? ಬಣ್ಣ ಮಾಸಿದ, ತೇಪೆ ಹಚ್ಚಿದ, ಒಂದು ಸಾದಾ ನಿಲುವಂಗಿ! (ಪರ್ಷಿಯಾದಲ್ಲಿ ಕುರಿ ಕಾಯುವವರ ಒಂದು ವಿಶೇಷ ಉಡುಪು) ಒಂದು ಉದ್ದನೆ ಬಿದುರು ಕೋಲು! ಅಷ್ಟೆ. ದೊರೆಯ ಪ್ರಶ್ನಾರ್ಥಕ ನೋಟ ಕಂಡು ದಾರಾ 'ಮಹಾಸ್ವಾಮಿ ತಾವು ಕೃಪೆ ದೋರಿ, ನನ್ನನ್ನು ಅರಮನೆಗೆ ಕರೆತರುವ ಮುನ್ನ ನಾನೊಬ್ಬ ಕುರಿಕಾಯುವ ಕುರಿಗಾಹಿಯಾಗಿದ್ದೆ. ತಾವು ನನಗೆ ಆಶ್ರಯ ಅಧಿಕಾರ ಎಲ್ಲಾ ನೀಡಿದಿರಿ. ಆದರೆ ಆಸ್ಥಾನ, ಮಾನ, ಸುಖ ಭೋಗಗಳು ಶಾಶ್ವತವಾದುದಲ್ಲ. ಅಧಿಕಾರ ಅಂತಸ್ತುಗಳು ಮಾನವನ ತಲೆತಿರುಗಿಸಿ ಬಿಡಬಲ್ಲವು. ಮೇಲಕ್ಕೇರಿದಂತೆ ಮಾಡಿ, ಪ್ರಪಾತಕ್ಕೂ ತಳ್ಳಬಲ್ಲವು. ಅಡ್ಡದಾರಿ ಹಿಡಿಸಿ ಅಹಂಭಾವ ತುಂಬಿ ಅಧಃಪತನಕ್ಕೆ ತಳ್ಳಬಲ್ಲವು. ಆದರೆ ಯಾರು ತಮ್ಮ ಹಿಂದಿನ ಸ್ಥಿತಿ ಗತಿಗಳನ್ನು, ನಡೆದು ಬಂದ ಹಾದಿಯನ್ನೂ ಮರೆಯದೆ ನೆನಪಿಸಿಕೊಳ್ಳುತ್ತಾ ಮುಂದುವರೆಯುತ್ತಿರುತ್ತಾರೋ ಅಂತಹವರಿಗೆ ದೈವ ಕೃಪೆ, ಅದೃಷ್ಟ ಬಲ ಎರಡೂ ಸಹಾಯಕ್ಕಿರುತ್ತವೆ ಎಂದು ನಂಬಿದ್ದೇನೆ. ಆದ್ದರಿಂದಲೇ ನಾನು ಈ ಪೋಷಾಕನ್ನು ಜತನವಾಗಿರಿಸಿಕೊಂಡಿದ್ದೇನೆ. ಇವು ನನ್ನ ಗತ ಜೀವನದ ಕುರುಹುಗಳಾಗಿವೆ. ಇವು ನನ್ನನ್ನು ಸತ್ಯನಿಷ್ಠನನ್ನಾಗಿಯೂ, ಪ್ರಾಮಾಣಿಕನನ್ನಾಗಿಯೂ ರೂಪಿಸಲು ನೆರವಾಗಿವೆ. ಪ್ರತಿ ರಾತ್ರಿ ಮಲಗುವ ಮುನ್ನ ಈ ಉಡುಪುಗಳನ್ನು ನೋಡುವ ಅಭ್ಯಾಸವಿರಿಸಿಕೊಂಡಿದ್ದೇನೆ. ಇಂದಿನ ನನ್ನ ಕೀರ್ತಿ ಮತ್ತು ಸುಖ ಜೀವನದ ಅಮಲಿನಲ್ಲಿ ಗತಬದುಕನ್ನು ಮರೆಯಬಾರದಲ್ಲವೇ? ಮಹಾಸ್ವಾಮಿ, ಬಾಹ್ಯದಲ್ಲಿ 'ದಾರಾ' ಪ್ರಾಂತ್ಯಾಧಿಕಾರಿಯಾಗಿದ್ದರೂ, ಅಂತರಂಗದಲ್ಲಿ ಮಾತ್ರ ಅವನೊಬ್ಬ ಹಿಂದಿನ ಸರಳ ಕುರಿಕಾಯುವವ ತಮ್ಮ ಪ್ರೀತಿಗೂ ನಂಬಿಕೆಗೂ ಪಾತ್ರನಾಗಲು ಬೇಕಾದ ಯೋಗ್ಯತೆ ಮತ್ತು ಪ್ರಾಮಾಣಿಕತೆಗಳು ಈ ಉಡುಗೆಯ ಕೊಡುಗೆಗಳೇ ಆಗಿವೆ' ಎಂದು ಅಭಿಮಾನದಿಂದ ಉತ್ತರಿಸಿದನು.

ಅವನ ಈ ಪ್ರಾಮಾಣಿಕ ಉತ್ತರದಿಂದ ಅತ್ಯಂತ ಸಂತೋಷಗೊಂಡ ದೊರೆಯು ಅಂದಿನಿಂದ ದಾರಾನನ್ನು ಇನ್ನೂ ಹೆಚ್ಚಿನ ಪ್ರೀತ್ಯಾದರಗಳಿಂದ ಕಾಣ ತೊಡಗಿದನು!

**(ಆಧಾರ) ಡಿ.ಎ.ನಳನಿಕುಮಾರ್, ದಾವಣಗೆರೆ**